**ದಿನಾಂಕಃ 26-09-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ಶ್ರೀ.ಎನ್ ಟಿ ಎನ್ ವಕೀಲರಿಂದ:**

ಈ ಘಟನೆಯು ಯಾವ ದಿನಾಂಕದಂದು ಆಯಿತು ಎಂಬುದು ನನಗೆ ತಲೆಗೆ ಪೆಟ್ಟಾದ ಕಾರಣ ಗೊತ್ತಿಲ್ಲ. ನಾನು ಮತ್ತು ಚಾಸಾ-5 ರವರು ಗೋವಿನ ಜೋಳವನ್ನು ಬಿತ್ತಲು ಹೋಗಿದ ಸಂದರ್ಭದಲ್ಲಿ ಆರೋಪಿತರು ಜಗಳ ತೆಗೆದು ನನ್ನ ತಲೆಗೆ ಬಡಿಗೆಯಿಂದ ಹಲ್ಲೆ ಮಾಡಿದರು. ಆ ಜಮೀನಿನ ಸರ್ವೇ ನಂಬರ ನನಗೆ ನೆನಪಿಲ್ಲ. ಆ ದಿನ 1 ಮತ್ತು 2 ನೇ ಆರೋಪಿತರು ನನಗೆ ಮತ್ತು ಚಾಸಾ-5 ರವರಿಗೆ ಹಲ್ಲೆ ಮಾಡಿದರು. ಆ ಸಂದರ್ಭದಲ್ಲಿ ಮೂರು ಜನ ಆರೋಪಿತರ

ಕೈಯಲ್ಲಿಯೂ ಸಹ ಬಡಿಗೆಗಳು ಇದ್ದವು. ಆರೋಪಿತರು ಹಲ್ಲೆ ಮಾಡಿದ ಕಾರಣ ನನ್ನ ತಲೆಗೆ ಗಾಯವಾಗಿತ್ತು. ಇದರಿಂದ ನನ್ನ ತಲೆಗೆ ಗಾಯವಾಗಿ ರಕ್ತ ಬರುತ್ತಿತ್ತು. ಆರೊಪಿತರು ಹಲ್ಲೆ ಮಾಡಿದ ಕಾರಣ ನನಗೆ ಪ್ರಜ್ಞೆ ತಪ್ಪಿತ್ತು. ಆ ಕಾರಣ ಆ ನಂತರ ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಗೆ ಹೋದ ನಂತರ ನನಗೆ ಪ್ರಜ್ಞೆ ಬಂತು. ಈ ಜಮೀನಿನ ಸಂಬಂಧವಾಗಿ ಚಾಸಾ–5 ರವರು ಆರೋಪಿತರ ವಿರುದ್ಧ ಒಂದು ಸಿವಿಲ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆ ಜಮೀನಿನ ಸಂಬಂಧ ಆಗಿಂದ್ದಾಗ್ಗೆ ಪಂಚಾಯತಿ ಮತ್ತು ಬಾಯಿ ಮಾತಿನ ಮೂಲಕ ಗಲಾಟೆ ಆಗುತ್ತಿತ್ತು. ಈ ಗಲಾಟೆಯ ಸಂಬಂಧ ದೂರನ್ನು ನನ್ನ ಮಗ ಚಾಸಾ–1 ರವರು ನೀಡಿರುತ್ತಾರೆ. ದೂರನ್ನು ಯಾರು ಬರೆದರು ಎಂಬುದು ನನಗೆ ಗೊತ್ತಿಲ್ಲ. ಅದೇ ರೀತಿ ಆ ದೂರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಆ ದೂರಿನಲ್ಲಿ ಬರೆದಿರುವ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ನನಗೆ ಬಡಿಗೆಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಆಸ್ಪತ್ರೆಗೆ ಹೋಗಿಲ್ಲ, ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ದೂರನ್ನು ಯಾವ ದಿನಾಂಕದಂದು ಕೊಟ್ಟೆನು ಎಂಬುದು ಈಗ ನನಗೆ ನೆನಪಿಲ್ಲ. ಚಾಸಾ–5 ರವರು ಆರೋಪಿತರ ವಿರುದ್ಧ ಸಲ್ಲಿಸಲಾದ ಸಿವಿಲ ವ್ಯಾಜ್ಯದ ವೈಮನಸ್ಸಿನಿಂದ ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಬಡಿಗೆಗಳು ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಲ್ಲಾ ರೈತರ ಮನೆಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಈ ಕೇಸಿಗೆ ಅನುಕೂಲವಾಗಲಿ ಎಂಬ ಕಾರಣಕ್ಕಾಗಿ ಪೊಲೀಸರು ಬಡಿಗೆಯನ್ನು ಜಪ್ತು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ